# ನಿರ್ದೇಶನದ ಯೋಚನೆ ಸದ್ಯಕ್ಕಿಲ್ಲ

**ಅಶ್ವಿನ್ ಎಚ್.**
ಕಲರ್ಸ್ ಕನ್ನಡದ 'ಕರಿಮಣಿ'ಯ ಕರ್ಣ

◆ **ಕರಿಮಣಿಯ ಮಾಲೀಕ ಆಗುವುದು ಯಾವಾಗ?**

ಅದು ಕುತೂಹಲದ ಪ್ರಶ್ನೆ. ಅದನ್ನು ಪ್ರೇಕ್ಷಕರೇ ಕಾದು ನೋಡಬೇಕು. ಯಾರು ಆಗುತ್ತಾರೆ ಎನ್ನುವುದು ಇನ್ನೂ ಗೊತ್ತಿಲ್ಲ. ಕಾದು ನೋಡಿದರೆ ಮಜಾ ಇರುತ್ತದೆ ಎನ್ನುವ ಕಾರಣಕ್ಕೆ ಮದುವೆಗೆ ಅಡ್ಡಿ ಆತಂಕಗಳು ಎದುರಾಗುತ್ತಿವೆ. ಅದು ಸ್ವಾಭಾವಿಕ ಎಂದು ಅನ್ನಿಸುತ್ತದೆ. ಇಂತಹ ಪಾತ್ರ ಮಾಡುತ್ತಿರುವುದು ಖುಷಿ ಇದೆ. ಪುರುಷ ಪ್ರಧಾನ ಪಾತ್ರಗಳ ಧಾರಾವಾಹಿಗಳ ಪ್ರಮಾಣ ಕಡಿಮೆ. ನಾಯಕ ಪ್ರಧಾನ ಕಥೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಎಲ್ಲ ರೀತಿಯ ಗುಣಗಳೂ ಇವೆ. ಅವನು ಒಳ್ಳೆಯವನೋ ಕೆಟ್ಟವನೋ ಎಂದು ಸರಳವಾಗಿ ಹೇಳಲು ಬರುವುದಿಲ್ಲ. ಸಂಕೀರ್ಣ ವ್ಯಕ್ತಿತ್ವ ಅವನದು. ನಾಯಕನಾಗಿ ಖಳನಾಯಕನ ಛಾಯೆಯನ್ನು ಪ್ರತಿನಿಧಿಸಬೇಕು. ಒಟ್ಟಾರೆ ನಟನೆ ಮಾಡಲು ಒಳ್ಳೆಯ ಅವಕಾಶ ಇಲ್ಲಿದೆ.

◆ **ಅಭಿನಯ ನಿಮಗೆ ಹೇಗೆ ಒಲಿದು ಬಂತು?**

ಚಿಕ್ಕವಯಸ್ಸಿನಲ್ಲೇ ನನಗೆ ರಂಗಭೂಮಿಯ ಪ್ರೀತಿ ಹುಟ್ಟಿಕೊಂಡಿತ್ತು. ಅಮ್ಮ ಕೂಡ ಅದಕ್ಕೆ ಪೂರಕವಾಗಿ ನಾಟಕಗಳಲ್ಲಿ ಅಭಿನಯಿಸಲು ಪ್ರೇರೇಪಿಸುತ್ತಿದ್ದರು. ಅವರು ನಾಟಕಗಳಿಗೆ ಸೇರಿಸಿದ್ದರು. ಅದನ್ನು ನಾನು ಎಂಜಾಯ್ ಮಾಡುತ್ತಿದ್ದೆ. ನನ್ನ ತಾತ ರಾಮಸಂಜೀವಯ್ಯ ರಂಗಭೂಮಿ ಕಲಾವಿದರು. ನಾನು ನಟನಾಗಲು ಅವರ ಪ್ರಭಾವ ಕೂಡ ಒಂದು ಕಾರಣ. ಅಭಿನಯ ಕೊಡುತ್ತಿದ್ದ ಸಂತೋಷಕ್ಕೆ ಅದನ್ನೇ ವೃತ್ತಿಯಾಗಿ ತೆಗೆದುಕೊಳ್ಳಬೇಕು ಎಂದು ಅನ್ನಿಸಿತು. ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೆ. ಇದೇನು ಸುಲಭಕ್ಕೆ ಸಿಕ್ಕಿಲ್ಲ. ಒಂದು ಅವಕಾಶಕ್ಕಾಗಿ ಕಠಿಣ ಪರಿಶ್ರಮದ ಹಾದಿಯನ್ನು ಸವೆಸಿದ್ದೇನೆ. ಒಂದು ಹಂತದಲ್ಲಿ ಅಭಿನಯ ನನಗೆ ಒಲಿಯುವುದಿಲ್ಲ ಎಂದು ಅನ್ನಿಸಿದ್ದೂ ಇದೆ. ರಂಗಭೂಮಿ ಜೊತೆ ಕಿರುಚಿತ್ರಗಳನ್ನು ಮಾಡುತ್ತಿದ್ದೆ. ಪ್ರತಿ ಕಿರುಚಿತ್ರ ಮಾಡಿದ ನಂತರ ಇದು ಏನೋ ಆಗುತ್ತೆ, ಮುಂದೆ ನನ್ನ ಜೀವನದಲ್ಲಿ ಏನೋ ಬದಲಾವಣೆ ಆಗುತ್ತದೆ ಎಂದು ಅನ್ನಿಸುತ್ತಿತ್ತು. ಏನೂ ಆಗುವುದಿಲ್ಲ ಎಂದು ನಿರ್ಧಾರ ಮಾಡಿದ ದಿನಗಳೂ ಇದ್ದವು. ಇತ್ತೀಚೆಗೆ 'ರಾಗ ಮತ್ತು ತಾಳ' ಎಂಬ ಕಿರುಚಿತ್ರ ಮಾಡಿದ್ದೆ. ಅದು ಚೆನ್ನಾಗಿತ್ತು. ಅದೇ ಕೊನೆಯ ಪ್ರಯತ್ನ ಎಂದುಕೊಂಡಿದ್ದೆ, ಅದರ ಬೆನ್ನಿಗೆ ಇದು ಸಿಕ್ಕಿದೆ.

◆ **ಕರ್ಣನಾಗಿ ಬಣ್ಣ ಹಚ್ಚಿದ ಮೊದಲ ದಿನ ಹೇಗಿತ್ತು?**

ಅವತ್ತು ಚಾನಲ್ ಮುಖ್ಯಸ್ಥರು, ನಿರ್ಮಾಪಕರು ಸೇರಿದಂತೆ ಆಡಳಿತವರ್ಗದ ಅನೇಕರು ಬಂದಿದ್ದರು. ಅವರೆಲ್ಲ ಮಾನಿಟರ್ ಮುಂದೆ ಕುಳಿತು ನೋಡುತ್ತಿದ್ದರು. ನನಗೆ ಅದಕ್ಕಿಂತ ಮುಂಚೆ ಏನೆಲ್ಲ ಪಾತ್ರಗಳನ್ನು ಮಾಡಿದ್ದರೂ ಯಾರೋ ನನ್ನನ್ನು ನೋಡಿ ತೀರ್ಮಾನ ಮಾಡುತ್ತಿದ್ದಾರೆ ಎನ್ನುವ ಭಯ ಇತ್ತು. ಆದರೆ ತಂಡ ನನಗೆ ಆ ಭಯವನ್ನು ದೂರ ಮಾಡಿತು. ಚಾನಲ್ ಮುಖ್ಯಸ್ಥರನ್ನು ನಾನು ಭೇಟಿ ಆಗಿರಲಿಲ್ಲ. ಮುಖ್ಯ ನಿರ್ಮಾಪಕರನ್ನೂ ಅವತ್ತೇ ಭೇಟಿ ಆಗಿದ್ದೆ. ಅವರು ಚೆನ್ನಾಗಿ ಮಾಡುತ್ತೀಯಾ ಎಂದು ಬೆನ್ನುತಟ್ಟಿದರು. ಅದು ಇನ್ನೂ ವಿಶ್ವಾಸವನ್ನು ತುಂಬಿತು. ಏನೋ ಮಾಡಬೇಕು ಎನ್ನುವ ಕನಸು ಹೊತ್ತಿದ್ದ ನನಗೆ ಅಂದು ರಾತ್ರಿ ನಿದ್ದೆನೇ ಬರ್ತಿರಲಿಲ್ಲ. ಹತ್ತು ವರ್ಷದ ಕನಸಿನ ಪ್ರಯಾಣ ಆರಂಭ ಆಯಿತು ಎಂದು ಅನ್ನಿಸಿತು.

◆ **ನಟನೆ ಬಿಟ್ಟು ಬೇರೆ ಇನ್ನೇನಾದರೂ ಯೋಚನೆ ಇತ್ತಾ?**

ನಿರ್ದಿಷ್ಟ ಯೋಜನೆ ಇರಲಿಲ್ಲ. ಆದರೆ ಏನಾದರೂ ಮಾಡಬೇಕು ಎನ್ನುವ ಯೋಚನೆ ಇತ್ತು. ನಟನೆಯನ್ನೇ ಮಾಡಬೇಕು ಎಂದುಕೊಂಡಿದ್ದವನಿಗೆ ಯಾವ ಪ್ರಾಜೆಕ್ಟ್ ಕೂಡ ಕೈಗೂಡುತ್ತಿಲ್ಲ ಎನ್ನುವ ಆತಂಕ ಬೇರೆ ಕಾಡುತ್ತಿತ್ತು. ದಿನಗಳನ್ನು ತಳ್ಳುತ್ತಲೇ ಇದ್ದಾಗ ಏನಾದರೂ ಮಾಡಲೇಬೇಕು ಎನ್ನುವ ನಿರ್ಧಾರವನ್ನು ಒಲ್ಲದ ಮನಸ್ಸಿನಿಂದಲೇ ಮಾಡಿದ್ದೆ. ಆದರೆ ಏನು ಮಾಡುವುದು ಎನ್ನುವ ಸ್ಪಷ್ಟತೆ ಮೂಡಿರಲಿಲ್ಲ. ಅದೇ ಸಮಯಕ್ಕೆ ಇದು ಸಿಕ್ಕಿದೆ, ನನ್ನ ವೃತ್ತಿ ಬದುಕು ಆರಂಭ ಆಗಿದೆ. ಪ್ರೇಕ್ಷಕರು ಈ ಪಾತ್ರದ ಮೂಲಕ ನನ್ನನ್ನು ಸ್ವೀಕರಿಸಿದ್ದಾರೆ. ಈಗಾಗಲೇ ಅಲ್ಲಲ್ಲಿ ಗುರುತಿಸಿ ಮಾತನಾಡಿಸುತ್ತಾರೆ. ನನ್ನ ಅನುಭವವನ್ನೂ ಬೆಸೆದು ಎಷ್ಟು ಚೆನ್ನಾಗಿ ಈ ಪಾತ್ರವನ್ನು ನಿರ್ವಹಿಸಲು ಸಾಧ್ಯವೋ ಅಷ್ಟು ಪ್ರಯತ್ನವನ್ನು ಮಾಡುತ್ತೇನೆ.

◆ **ನಿರ್ದೇಶಕ ಆಗುವ ಸಂದರ್ಭ ಬಂದರೆ, ಏನು ಹೇಳುತ್ತೀರಿ?**

ಬಹುಶಃ ನಾನು ಆಗಲ್ಲ ಅಂತ ಅನ್ನಿಸುತ್ತದೆ. ಕಿರುಚಿತ್ರಗಳನ್ನು ಮಾಡುವಾಗ ಅಂತಹ ಅನುಭವ ಆಗಿದೆ. ನಿರ್ಮಾಣದ ಪ್ರತಿ ಹಂತದ ಕೆಲಸಗಳನ್ನು ಮಾಡಿದ್ದೇನೆ. ನಿರ್ದೇಶನದ ಬಗ್ಗೆ ಗೊತ್ತು, ಮಾಡಬಹುದು. ಆದರೆ, ಸದ್ಯ ಮಾಡುವ ಮನಸು ಇಲ್ಲ. ಮುಂದೆ ಏನು ಅಂತ ಗೊತ್ತಿಲ್ಲ. ಮಾಡಿದರೂ ಮಾಡಬಹುದು. ಅಂತಹ ಪರಿಸ್ಥಿತಿ ಬಂದಾಗ ನೋಡಬಹುದು. ಈಗಂತೂ ಖಂಡಿತ ನಿರ್ದೇಶನದ ಯಾವ ಯೋಚನೆಯೂ ಇಲ್ಲ.



■ **ರಾಘವೇಂದ್ರ ಕೆ.**